RNU AIR DHARWAD

FEBRUARY 25, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ; 19ನೇ ಕಂತಿನ 2 ಸಾವಿರ ರೂಪಾಯಿ, ರೈತರ ಖಾತೆಗೆ ಜಮೆ.
- ರಸ್ತೆ ಸಾರಿಗೆ ಸಂಸ್ಥೆ, ಬೆಳಗಾವಿ ವಿಭಾಗದ ಚಾಲಕ, ನಿರ್ವಾಹಕರ ಮೇಲಿನ, 63 ಹಲ್ಲೆ ಪ್ರಕರಣಗಳ ಬಗ್ಗೆ, ಕ್ರಮಕ್ಕೆ ಸೂಚನೆ.
- ಕಲಬುರಗಿಯ, ಶ್ರೀ ಶರಣಬಸವೇಶ್ವರ ಜಾತ್ರೆ ಮೈದಾನದಲ್ಲಿ, ರಾಷ್ಟ್ರ ಮಟ್ಟದ 'ನಮ್ಮ ಸರಸ್ ಮೇಳ'ಕ್ಕೆ ಚಾಲನೆ.
- ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ; ಮಾರ್ಚ್ 1, ಮೊದಲ ಶನಿವಾರ, 'ಓಪನ್ ಡೇ', ಮುಕ್ತ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ, ರೈತರ ಬ್ಯಾಂಕ್ ಖಾತೆಗಳಿಗೆ, ತಲಾ ಎರಡು ಸಾವಿರ ರೂಪಾಯಿಯನ್ನು, ಪ್ರಧಾನಮಂತ್ರಿಯವರು ಜಮೆ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ರೈತರು, ಕೃಷಿ ಚಟುಟಿಕೆಗಳ ಮೇಲ್ ಖರ್ಚಿಗೆ ಈ ದುಡ್ಡು ಸಹಾಯವಾಗಿದೆ ಎಂದು ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

ಮಂಡ್ಯದ ರೈತ ಸೋಮ ಶಂಕರೇಗೌಡ, ಕೇಂದ್ರದ ಆರ್ಥಿಕ ನೆರವು, ಬರದ ಸಂಕಟದಿಂದ ಕಾಪಾಡಿದೆ ಎಂದಿದ್ದಾರೆ.

<><><>

1. ರೈತ ಸೋಮ ಶಂಕರೇಗೌಡ ಧ್ವನಿ 10 ಸೆಕೆಂದುಗಳು

<><><>

ನಾಗಮಂಗಲದ ರೈತ ಸಂತೋಷ್ ತಿಮ್ಮೇಗೌಡ, ಕೇಂದ್ರದ ನೆರವಿನಿಂದ, ರೈತರು ವಿವಿಧ ಕೃಷಿ ಉಪಕರಣಗಳನ್ನು ಖರೀದಿಸಲು ಅನುಕೂಲವಾಗಿದೆ, ಎಂದರು.

<><><>

2. ರೈತ ಸಂತೋಷ್ ತಿಮ್ಮೇಗೌಡ ಧ್ವನಿ 13 ಸೆಕೆಂದುಗಳು

<><><>

ಪ್ರಗತಿಪರ ರೈತ ರಾಜೇಗೌಡ, ಸಕಾಲದಲ್ಲಿ ಕೇಂದ್ರ ಸರ್ಕಾರ ನೀಡಿರುವ ಹಣ ಕೃಷಿಯಲ್ಲಿ ಹೂಡಿಕೆ ಮಾಡಲು ಸಣ್ಣ ಪ್ರಮಾಣದ ನೆರವು ನೀಡಿದೆ, ಎಂದರು.

<><><>

3. ರೈತ ರಾಜೇಗೌಡ ಧ್ವನಿ 13 ಸೆಕೆಂದುಗಳು

<><><>

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ, 19ನೇ ಕಂತಿನ 2 ಸಾವಿರ ರೂಪಾಯಿ, ರೈತರ ಖಾತೆಗೆ ಜಮೆಯಾಗಿದೆ.

<><><>

ಧಾರವಾಡ ಜಿಲ್ಲೆಯಲ್ಲಿ, 18ನೇ ಕಂತಿನ ವರೆಗೆ, 19 ಲಕ್ಷ 73 ಸಾವಿರದ 969 ರೈತರು, 417 ಕೋಟಿ 81 ಲಕ್ಷ ರೂಪಾಯಿ ಸಹಾಯ ಧನ ಪಡೆದಿದ್ದಾರೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. 19ನೇ ಕಂತಿನಲ್ಲಿ ಧಾರವಾಡ ಜಿಲ್ಲೆಯ, 1 ಲಕ್ಷ 2 ಸಾವಿರದ 904 ರೈತರಿಗೆ  20 ಕೋಟಿ 58 ಲಕ್ಷ ರೂಪಾಯಿ,  ಹಾಗೂ ಕರ್ನಾಟಕದ ಒಟ್ಟು 44 ಲಕ್ಷ 20 ಸಾವಿರದ 86 ರೈತರಿಗೆ, 884 ಕೋಟಿ ರೂಪಾಯಿ ಸಹಾಯ ಧನ ಬಿಡುಗಡೆಯಾಗಿದೆ.. ಒಟ್ಟಾರೆ, ಧಾರವಾಡ ಜಿಲ್ಲೆಯ ರೈತರಿಗೆ, 436 ಕೋಟಿ ರೂಪಾಯಿ ಧನ ಸಹಾಯ ಲಭಿಸಿದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

ಪ್ರಧಾನಮಂತ್ರಿಯವರು, ರೈತ ಸಮ್ಮಾನ್ ಯೋಜನೆಯ 19ನೇ ಕಂತನ್ನು ಬಿಹಾರದಲ್ಲಿ ಬಿಡುಗಡೆ ಮಾಡಿದ ಕಾರ್ಯಕ್ರಮವನ್ನು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಂಡ್ಯ ತಾಲೂಕಿನ ವಿ.ಸಿ.ಫಾರ್ಮ್ ಸಭಾಂಗಣದಲ್ಲಿ ವೀಕ್ಷಿಸಿದರು.

<><><>

ಬೆಳಗಾವಿ ಜಿಲ್ಲೆ, ಬಾಳೇಕುಂದ್ರಿ ಗ್ರಾಮದಲ್ಲಿ, ಬಸ್ ಟಿಕೆಟ್ ಪಡೆಯುವ ವಿಷಯದಲ್ಲಿ, ರಾಜ್ಯ ಸಾರಿಗೆ ಸಂಸ್ಥೆ ಬಸ್ ಚಾಲಕ ಮತ್ತು ನಿರ್ವಾಹಕರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿ, ಐವರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ಸಾರಿಗೆ ಸಿಬ್ಬಂದಿ ಮೇಲಿನ ಹಲ್ಲೆ ಪ್ರಕರಣದಲ್ಲಿ ಒಟ್ಟು 14 ಜನ ಭಾಗಿಯಾಗಿದ್ದಾರೆ. ಹಲ್ಲೆ ವಿಷಯ ತಿರುವು ಪಡೆದುಕೊಂಡು, ಭಾಷಾ ವಿವಾದವಾಗಿ ಪರಿಣಮಿಸಿದೆ. ಉಭಯ ರಾಜ್ಯಗಳ ಮಧ್ಯೆ ಬಸ್ ಸಂಚಾರ ಸ್ಥಗಿತಗೊಂಡಿದೆ. ಸಾರಿಗೆ ಇಲಾಖೆ ಕಾರ್ಯದರ್ಶಿಯವರು, ಮಹಾರಾಷ್ಟ್ರ ಸಾರಿಗೆ ಖಾತೆ ಸಚಿವರೊಂದಿಗೆ ಸಮಾಲೋಚಿಸಲಿದ್ದಾರೆ ಎಂದರು.

<><><>

ಹಲ್ಲೆಗೀಡಾದ ಬಸ್ ಚಾಲಕರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ದುರುದ್ದೇಶದಿಂದ ಅವರ ಮೇಲೆ ಪೊಕ್ಸೋ ಪ್ರಕರಣ ದಾಖಲಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು, ಸಚಿವರು ಭರವಸೆ ನೀಡಿದರು.

<><><>

ರಾಜ್ಯ ಸಾರಿಗೆ ಸಂಸ್ಥೆಯ, ಬೆಳಗಾವಿ ವಿಭಾಗದ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಅವರು, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ, ಚಾಲಕ ಮತ್ತು ನಿರ್ವಾಹಕರ ಮೇಲೆ, ನಡೆದ 63 ಹಲ್ಲೆ ಪ್ರಕರಣಗಳ ಬಗ್ಗೆ, ಅಗತ್ಯ ಕ್ರಮ ಕೈಗೊಳ್ಳುವಂತೆ, ಬೆಳಗಾವಿ ಉತ್ತರ ವಲಯ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಚೇತನ್ ಸಿಂಗ್ ರಾಠೋಡ ಅವರಿಗೆ, ಪತ್ರ ಬರೆದಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಮಾರ್ಚ್ 8ನೇ ತಾರೀಖು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು, 'ಕ್ರಿಯೆಯ ವೇಗವರ್ಧಿಸಿ' ಎಂಬ ಧ್ಯೇಯದೊಂದಿಗೆ, ದೇಶಾದ್ಯಂತ ವಿಶೇಷವಾಗಿ ಆಚರಿಸಲಾಗುತ್ತಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್' ನ 119ನೇ ಸಂಚಿಕೆಯಲ್ಲಿ, ಸಾಧಕ ನಾರಿಶಕ್ತಿಯ ಕರ್ತೃತ್ವ ಶಕ್ತಿಯನ್ನು ಸಂಭ್ರಮಿಸುವಂತೆ, ಜನತೆಯಲ್ಲಿ ಮನವಿ ಮಾಡಿದ್ದಾರೆ.

<><><>

ಧಾರವಾಡದ ಸಿರಿ ಹ್ಯಾಂಡಿ ಕ್ರಾಫ್ಟ್ ಸಂಸ್ಥೆ, ಉತ್ತರ ಕರ್ನಾಟಕದ ಗ್ರಾಮೀಣ ಸೊಗಡಿನ, ಜಾನಪದೀಯ ಕಲೆ ಸಮ್ಮಿಳಿತ ಕೌದಿಗಳನ್ನು, ಪುನರುಜ್ಜೀವಿತಗೊಳಿಸಲು, ಕಳೆದ 12 ವರ್ಷಗಳಿಂದ, ತೊಡಗಿಕೊಂಡಿದೆ. 20ಕ್ಕೂ ಹೆಚ್ಚು ಗ್ರಾಮೀಣ ತಾಯಂದಿರಿಗೆ, ಬಿಡುವಿನ ವೇಳೆಯಲ್ಲಿ, ಪರ್ಯಾಯ ಆದಾಯ ಮೂಲವಾಗಿ, ಪರಿಸರ ಸ್ನೇಹಿ, ಮೌಲ್ಯವರ್ಧಿತ ಕೌದಿ ಹೆಣಿಕೆ ಕಲೆ ಉಳಿಸಿಕೊಳ್ಳಲು, ಸಹಕಾರಿಯಾಗುವಂತೆ, ಯುವ ಸಾಮಾಜಿಕ ಉದ್ಯಮಿ, ಮಮತಾ ಪ್ರಶಾಂತ ಸತ್ತೂರ ಪ್ರಯತ್ನಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

4. ಮಮತಾ ಪ್ರಶಾಂತ ಸತ್ತೂರ ಧ್ವನಿ 50 ಸೆಕೆಂದುಗಳು.

<><><>

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಕಲಬುರಗಿಯ, ಶ್ರೀ ಶರಣಬಸವೇಶ್ವರ ಜಾತ್ರೆ ಮೈದಾನದಲ್ಲಿ, ರಾಷ್ಟ್ರ ಮಟ್ಟದ 'ನಮ್ಮ ಸರಸ್ ಮೇಳ'ಕ್ಕೆ ಚಾಲನೆ ನೀಡಿದರು. 10 ದಿನಗಳ ಕಾಲ ನಡೆಯಲಿರುವ, ಕರಕುಶಲ ಮೇಳದಲ್ಲಿ, 9 ರಾಜ್ಯಗಳಿಂದ ಮಹಿಳಾ ಸ್ವ-ಸಹಾಯ ಗುಂಪುಗಳು, ತಮ್ಮ ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಅಣಿಗೊಳಿಸಿವೆ.

<><><>

ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನದ ನಿರ್ದೇಶಕಿ, ಪಿ.ಐ. ಶ್ರೀವಿದ್ಯಾ ಮಾತನಾಡಿ, ರಾಜ್ಯಾದ್ಯಂತ, 35 ಲಕ್ಷ ಮಹಿಳೆಯರು, ಮಹಿಳಾ ಸ್ವ-ಸಹಾಯ ಗುಂಪುಗಳ ಭಾಗವಾಗಿದ್ದು, ಇವರು ಉತ್ಪಾದಿಸುವ ವಸ್ತುಗಳ ಮಾರಾಟಕ್ಕೆ ವೇದಿಕೆ ಕಲ್ಪಿಸಲು, ಸರಸ್ ಮೇಳ ಕಲಬುರಗಿಯಲ್ಲಿ ಆಯೋಜಿಸಲಾಗಿದೆ ಎಂದರು.

<><><>

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ – ಐ.ಐ.ಎಸ್.ಸಿ. ಸಂಸ್ಥಾಪಕ, ಜೆಮ್‌ಶೆಡ್‌ಜೀ ಟಾಟಾ ಅವರ ಜನ್ಮ ದಿನದ ಹಿನ್ನೆಲೆ, ಮಾರ್ಚ್ ಮೊದಲ ಶನಿವಾರ, 'ಓಪನ್ ಡೇ' ಆಚರಿಸಲಾಗುತ್ತಿದೆ. ಮಾರ್ಚ್ 1 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯ ವರೆಗೆ, ಯಾರು ಬೇಕಾದರೂ ಮಲ್ಲೇಶ್ವರಂನ ಐ.ಐ.ಎಸ್.ಸಿ. ಕ್ಯಾಂಪಸ್ ಗೆ ಭೇಟಿ ನೀಡಿ, ವಿಜ್ಞಾನ ಪ್ರದರ್ಶನಗಳನ್ನು ವೀಕ್ಷಿಸಬಹುದು. ಸ್ವತಃ ಪ್ರಯೋಗಗಳನ್ನು ಮಾಡಬಹುದು. ಸಾರ್ವಜನಿಕರು ವಿಜ್ಞಾನಿಗಳ ಜೊತೆ ಸಂವಾದದಲ್ಲೂ ಪಾಲ್ಗೊಳ್ಳಬಹುದು. ಐ.ಐ.ಎಸ್.ಸಿ. ಯ 42 ವಿಭಾಗಗಳಿಗೆ ಭೇಟಿ ನೀಡಿ, ತಿಳಿದುಕೊಳ್ಳಬಹುದು.

<><><>

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇಂದು ದಿಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಕೇಂದ್ರ ಜಲಶಕ್ತಿ ಖಾತೆ ಸಚಿವ, ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು, ಭೇಟಿ ಮಾಡಿ ಸಮಾಲೋಚಿಸಲಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ನೆರವು, ಮೇಕೆದಾಟು, ಮಹಾದಾಯಿ, ಕೃ ್ಣ ಮೇಲ್ದಂಡೆ ಯೋಜನೆಗಳ ಕುರಿತು, ಚರ್ಚಿಸುವುದಾಗಿ ತಿಳಿಸಿದ್ದಾರೆ. ಬಳಿಕ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ್ ಖರ್ಗೆ, ರಾಹುಲ್ ಗಾಂಧಿಯವರನ್ನು ಭೇಟಿ ಮಾಡಲಿದ್ದಾರೆ.

<><><>

ಉತ್ತರಪ್ರದೇಶದ ಪ್ರಯಾಗರಾಜ್‌ನ ಮಹಾಕುಂಭಮೇಳದಲ್ಲಿ ಪಾಲ್ಗೊಂಡು ಮರಳುತ್ತಿದ್ದ, ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಯ, ಆರು ಜನ ಮೃತಪಟ್ಟು, ಇಬ್ಬರು ಗಾಯಗೊಂಡ ಘಟನೆ ವರದಿಯಾಗಿದೆ. ಮಧ್ಯ ಪ್ರದೇಶದ ಜಬಲ್ಪುರ ಜಿಲ್ಲೆಯ, ಪಹ್ರೆವಾದಲ್ಲಿ ನಿನ್ನೆ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ, ಬೆಳಗಾವಿ ಜಿಲ್ಲೆ, ಗೋಕಾಕ ನಗರದ ನಾಲ್ವರು, ಹುಕ್ಕೇರಿ ಹಾಗೂ ಬಾಗಲಕೋಟೆ ನಿವಾಸಿಗಳು ಸೇರಿ 6 ಜನ ಮೃತಪಟ್ಟಿದ್ದಾರೆ.

<><><>

ಕರ್ನಾಟಕ ಕುಲಪುರೋಹಿತ, ಆಲೂರು ವೆಂಕಟರಾವ್ ಅವರ, 61ನೇ ಪುಣ್ಯ ಸ್ಮರಣೆ ಇಂದು. ಧಾರವಾಡದ, ಆಲೂರು ವೆಂಕಟರಾವ್ ಭವನದಲ್ಲಿ ಬೆಳಗ್ಗೆ 10.30ಕ್ಕೆ ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಅಥಿತಿಯಾಗಿ, ಹೊಸ ದಿಲ್ಲಿಯ, ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೊದ ನಿವೃತ್ತ ಮಹಾ ನಿರ್ದೇಶಕ ಮನೀಶ ದೇಸಾಯಿ, ನಿವೃತ್ತ ಪ್ರಾಧ್ಯಾಪಕ ಜಿನದತ್ತ ಹಡಗಲಿ ಪಾಲ್ಗೊಳ್ಳಲಿದ್ದಾರೆ. ಪ್ರಮೋದ ಗಾಯಿ ಅಧ್ಯಕ್ಷತೆ ವಹಿಸುವರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ; 19ನೇ ಕಂತಿನ 2 ಸಾವಿರ ರೂಪಾಯಿ, ರೈತರ ಖಾತೆಗೆ ಜಮೆ.
- ರಸ್ತೆ ಸಾರಿಗೆ ಸಂಸ್ಥೆ, ಬೆಳಗಾವಿ ವಿಭಾಗದ ಚಾಲಕ, ನಿರ್ವಾಹಕರ ಮೇಲಿನ, 63 ಹಲ್ಲೆ ಪ್ರಕರಣಗಳ ಬಗ್ಗೆ, ಕ್ರಮಕ್ಕೆ ಸೂಚನೆ.
- ಕಲಬುರಗಿಯ, ಶ್ರೀ ಶರಣಬಸವೇಶ್ವರ ಜಾತ್ರೆ ಮೈದಾನದಲ್ಲಿ, ರಾಷ್ಟ್ರ ಮಟ್ಟದ 'ನಮ್ಮ ಸರಸ್ ಮೇಳ'ಕ್ಕೆ ಚಾಲನೆ.

- ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ; ಮಾರ್ಚ್ 1, ಮೊದಲ ಶನಿವಾರ, 'ಓಪನ್ ಡೇ' ಆಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>